# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ - 1032 (1201)
ಸದಸ್ಯರ ಹೆಸರು - ಶ್ರೀ ಆರ್. ಧರ್ಮಸೇನ
ಉತ್ತರಿಸಬೇಕಿದ್ದ ದಿನಾಂಕ - 26.02.2018
ಉತ್ತರಿಸುವ ಸಚಿವರು - ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಸಚಿವರು.

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಎಷ್ಟು ದೇವದಾಸಿಯರಿದ್ದಾರೆಂಬುದನ್ನು ಗುರುತಿಸಲಾಗಿದೆ: ಅವರಲ್ಲಿ ಯಾವ ಯಾವ ಜಾತಿಯವರು ಎಷ್ಟೆಷ್ಟು ಜನ ಇದ್ದಾರೆ. | ರಾಜ್ಯದಲ್ಲಿನ 14 ಜಿಲ್ಲೆಗಳಿಂದ ಒಟ್ಟು 46660 ಮಾಜಿ ದೇವದಾಸಿಯರನ್ನು ಗುರುತಿಸಲಾಗಿದೆ. ಜಾತಿ/ವರ್ಗವಾರು ವಿವರ ಈ ಕೆಳಕಾಣಿಸಿದೆ. (ಕೆಳಗಿನ ಕೋಷ್ಟಕ ನೋಡಿ) |
| ಆ | ಇವರಿಗೆ ಯಾವ ರೀತಿ ಪುನರ್‌ವಸತಿ ಕಲ್ಪಿಸಲಾಗಿದೆ; ಯಾವ ರೀತಿ ಸಹಾಯ ಮಾಡಲಾಗಿದೆ. | ಸರ್ಕಾರವು ಒದಗಿಸುವ ಆಯವ್ಯಯಕ್ಕೆ ಅನುಗುಣವಾಗಿ ಪ್ರತೀ ಸಾಲಿನಲ್ಲಿ ಕ್ರಿಯಾ ಯೋಜನೆಯನ್ನು ರಚಿಸಿ ಮಾಜಿ ದೇವದಾಸಿಯರು ಅವರ ಆದಾಯ ವೃದ್ಧಿಗಾಗಿ ಆದಾಯ ಉತ್ಪನ್ನಕರ ಚಟುವಟಿಕೆಯಲ್ಲಿ ತೊಡಗಲು ಪ್ರತಿ ಫಲಾನುಭವಿಗಳಿಗೆ ರೂ.50,000/-(ರೂ.25,000/-ಗಳು ಸಾಲ ಮತ್ತು ರೂ.25,000/- ಪ್ರೋತ್ಸಾಹಧನ)ಗಳನ್ನು ನಿಗಮದಿಂದ ನೇರವಾಗಿ ನೀಡಲಾಗುತ್ತಿದೆ. ಅಲ್ಲದೆ ಯೋಜನೆ ಬಗ್ಗೆ ಜನರಿಗೆ ಜಾಗೃತಿ ಮೂಡಿಸಲು ಜಾತ್ರಾ ಸಮಯದಲ್ಲಿ ಬೀದಿ ನಾಟಕಗಳ ಮೂಲಕ ಜಾಗೃತಿ ಶಿಬಿರಗಳನ್ನು, ಪದ್ಧತಿಯ ಬಗ್ಗೆ ಕಾನೂನುಗಳ ಅರಿವು ನೀಡಲು ಕಾನೂನು ಶಿಬಿರಗಳನ್ನು ಹಾಗೂ ಅವರುಗಳ ಆರೋಗ್ಯ ದೃಷ್ಟಿಯಿಂದ ತಾಲ್ಲೂಕು ಮಟ್ಟದಲ್ಲಿ ಹಾಗೂ ಜಿಲ್ಲಾ ಮಟ್ಟದಲ್ಲಿ ಆರೋಗ್ಯ ಶಿಬಿರಗಳನ್ನು ಏರ್ಪಡಿಸಲಾಗುತ್ತಿದೆ. 45 ವರ್ಷ ಮೀರಿದ ಮಾಜಿ ದೇವದಾಸಿಯರುಗಳಿಗೆ ಪ್ರತೀ ಮಾಹೆ ರೂ.1500/-ಗಳಂತೆ ಮಾಸಾಶನ ಒದಗಿಸಲಾಗುತ್ತಿದೆ. ನಿವೇಶನವುಳ್ಳ ವಸತಿ ರಹಿತ ಮಾಜಿ ಗ್ರಾಮೀಣ ಪ್ರದೇಶದ ದೇವದಾಸಿಯರುಗಳಿಗೆ ಘಟಕ ಒಂದಕ್ಕೆ ರೂ.175000/-ಗಳಂತೆ ಹಾಗೂ ನಗರ ಪ್ರದೇಶದಲ್ಲಿ ಘಟಕ ಒಂದಕ್ಕೆ ರೂ.2,00,000/-ಗಳಂತೆ ನಿಗಧಿ ಪಡಿಸಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಮುಖಾಂತರ ವಸತಿಗಳನ್ನು ನಿರ್ಮಿಸಿಕೊಡಲಾಗುತ್ತಿದೆ. |
| ಇ | ಬಳ್ಳಾರಿ ಜಿಲ್ಲೆ ಕಂಪ್ಲಿ ತಾಲ್ಲೂಕು ರಾಮಸಾಗರದಲ್ಲಿರುವ ಮಾದಿಗ ದೇವದಾಸಿಯರಿಗೆ ಯಾವುದೇ ರೀತಿಯ ಸೌಲಭ್ಯವನ್ನು ಕಲ್ಪಿಸಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಯಾವಾಗ ಸೌಲಭ್ಯಗಳನ್ನು ಕಲ್ಪಿಸಲಾಗುವುದು? | ಬಳ್ಳಾರಿ ಜಿಲ್ಲೆಯ ಕಂಪ್ಲಿ ತಾಲ್ಲೂಕಿನ ರಾಮಸಾಗರದಲ್ಲಿ ಮಾಜಿ ದೇವದಾಸಿಯರುಗಳ ಬಗ್ಗೆ 2007-08ನೇ ಸಾಲಿನಲ್ಲಿ ಸಮೀಕ್ಷೆ ನಡೆಸಿ 49 ಮಾಜಿ ದೇವದಾಸಿಯರನ್ನು ಗುರುತಿಸಲಾಗಿರುತ್ತದೆ. ಇವರಲ್ಲಿ ಇಬ್ಬರು ಮರಣ ಹೊಂದಿರುತ್ತಾರೆ. ಇಬ್ಬರು ಇತರೆ ಇಲಾಖೆಯಿಂದ ಹಾಗೂ 45 ಮಾಜಿ ದೇವದಾಸಿಯರು ನಿಗಮದ ವತಿಯಿಂದ ಮಾಸಾಶನ ಸೌಲಭ್ಯ ಪಡೆಯುತ್ತಿದ್ದಾರೆ. 35 ಮಾಜಿ ದೇವದಾಸಿಯರುಗಳಿಗೆ ಆದಾಯ ಉತ್ಪನ್ನಕರ ಚಟುವಟಿಕೆಯಲ್ಲಿ ಸೌಲಭ್ಯವನ್ನು ಕಲ್ಪಿಸಲಾಗಿದೆ. ಅಲ್ಲದೆ 12 ಮಾಜಿ ದೇವದಾಸಿ ಮಹಿಳೆಯರಿಗೆ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಮುಖಾಂತರ ವಸತಿಗಳನ್ನು ಕಲ್ಪಿಸಲಾಗಿದೆ. |

(ಅ ಉತ್ತರದಲ್ಲಿನ ಕೋಷ್ಟಕ)

| ಕ್ರ ಸಂ | ಒಟ್ಟು ಮಾಜಿ ದೇವದಾಸಿಯರ ಸಂಖ್ಯೆ | ಪ.ಜಾತಿ | ಪ.ಪಂಗಡ | ಅಲ್ಪಸಂಖ್ಯಾತರು | ಹಿಂದುಳಿದ/ಇತರೆ ವರ್ಗದವರು |
|---|---|---|---|---|---|
| 1 | 46660 | 42329 | 3820 | 15 | 496 |

ಸಂಖ್ಯೆ: ಮಮಇ 15 ಮಅನಿ 2018

(ಡಾ. ಜಯಮಾಲ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ,
ಹಿರಿಯ ನಾಗರೀಕರ ಸಬಲೀಕರಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು.